# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಗೊಟ್ಟಿಗೆರೆ ವಾರ್ಡ್ ಸಂಖ್ಯೆ: 194**

**ವಾರ್ಡ್ ಕಛೇರಿಯಲ್ಲಿ ದಿನಾಂಕ: 04-06-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದವರು**

1. ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ, ವಾರ್ಡ್ ನಂ.194, ಬಿಬಿಎಂಪಿ
2. ವಾರ್ಡ್ ಅಭಿಯಂತರರು
3. ಆರೋಗ್ಯಾಧಿಕಾರಿಗಳು, ಗೊಟ್ಟಿಗೆರೆ.
4. ಸಹಾಯಕ ಕಂದಾಯ ಅಧಿಕಾರಿ, ವಾರ್ಡ್ ನಂ.194, ಗೊಟ್ಟಿಗೆರೆ.
5. ತೋಟಗಾರಿಕೆ ಸಹಾಯಕರು, ಗೊಟ್ಟಿಗೆರೆ.
6. ಸಹಾಯಕ ಅಭಿಯಂತರರು(ಬೆಸ್ಕಾಂ).
7. ಕಿರಿಯ ಅಭಿಯಂತರರು(ಬಿಡಬ್ಲ್ಯೂಎಸ್ಎಸ್‌ಬಿ).
8. ಅಧ್ಯಕ್ಷರು, ರಾಯಲ್ ಕೌಂಟಿ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ
9. ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್ , ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ
10. ಅಧ್ಯಕ್ಷರು, ಪರಿವರ್ತನ ಸಂಘ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.
11. ಸೌತ್ ಅವಿನ್ಯೂ ಬಡಾವಣೆಯ ಪ್ರತಿನಿಧಿಗಳು
12. ಅಧ್ಯಕ್ಷರು ಸಾರಥಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ.
13. ಅರಣ್ಯಾಧಿಕಾರಿಗಳು ವಾರ್ಡ್ ನಂ.194, ಗೊಟ್ಟಿಗೆರೆ.

ದಿನಾಂಕ: 04.06.2022 ರಂದು ಮಧ್ಯಾಹ್ನ 3.00 ಗಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**1. ಕೋವಿಡ್-19 ಹರಡುವುದನ್ನು ತಡೆಗಟ್ಟುವ ಬಗ್ಗೆ.**

i) ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಪತ್ತೆಯಾಗುತ್ತಿದ್ದು ಈ ಸಂಬಂಧ ಸಾರ್ವಜನಿಕರು ಮಾಸ್ಕ್ ಧರಿಸುವುದರೊಂದಿಗೆ ಎಲ್ಲಾ ಕೋವಿಡ್ ನಿಯಮಗಳನ್ನು ಪಾಲಿಸಲು ತಿಳಿಸಲಾಯಿತು.

ii) ಮಳೆ ನೀರು ನಿಲ್ಲುವುದರಿಂದ ಡೆಂಗ್ಯೂ ಮತ್ತು ಮಲೇರಿಯಾ ಕಾಯಿಲೆಗಳು ಹೆಚ್ಚುತ್ತಿದ್ದು ಈ ಸಂಬಂಧ ಸಾರ್ವಜನಿಕರು/ಆರ್‌ಡಬ್ಲ್ಯೂಎಗಳು ತಮ್ಮ ತಮ್ಮ ಮನೆ ಸುತ್ತ ಮುತ್ತಲು ಸ್ವಚ್ಛವಿಡಲು ಸಲಹೆ ನೀಡಿದ್ದು, ರೋಗ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೆ ವೈದ್ಯರನ್ನು ಸಂಪರ್ಕಿಸಲು ಸೂಚಿಸಲಾಯಿತು. ವೈದ್ಯಾಧಿಕಾರಿಗಳು ಈ ಸಂಬಂಧ ಮುದ್ರಿಸಿರುವ ಪಾಂಪ್ಲೆಟ್‌ಗಳನ್ನು ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್/ಸಾರ್ವಜನಿಕರಲ್ಲಿ ಹಂಚಿಕೊಂಡು ತಮ್ಮ ಬಡಾವಣೆಯವರಿಗೂ ಅರಿವು ಮೂಡಿಸಲು ಕೋರಿದರು

-ಮು.ತಿ.ನೋ-

Scanned by CamScanner

**2. ಘನತ್ಯಾಜ್ಯ ನಿರ್ವಹಣೆ ಬಗ್ಗೆ :-**

i) ಗೊಟ್ಟಿಗೆರೆ ಸರ್ಕಾರಿ ಶಾಲೆ ಎದುರು, ಗೊಟ್ಟಿಗೆರೆ ಮುಖ್ಯ ರಸ್ತೆಯಲ್ಲಿರುವ ಮೆಡಾಕ್ಸ್ ಆಸ್ಪತ್ರೆ ಎದುರು, ಬಿ.ಕೆ.ಸರ್ಕಲ್ ಬಸ್ ತಂಗುದಾಣ, ಹಾಗೂ ಹಿಮಗಿರಿ ಮೆಡೋಸ್ ಪಕ್ಕದಲ್ಲಿ ಶೇಖರಗೊಂಡಿರುವ ಘನತ್ಯಾಜ್ಯವನ್ನು ತೆರವುಗೊಳಿಸಿರುವುದಾಗಿ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

ii) ರಾಯಲ್ ಕೌಂಟಿ ಬಡಾವಣೆಯ 3 ನೇ ಮುಖ್ಯ ರಸ್ತೆ, 80 ಅಡಿ ರಸ್ತೆ ಹಾಗೂ ಎಂ.ಬಿ.ಎಂ ಗ್ರೀನ್ ವುಡ್ ಅಪಾರ್ಟ್‌ಮೆಂಟ್‌ರಲ್ಲಿ ಶೇಖರಗೊಂಡಿರುವ ಘನತ್ಯಾಜ್ಯವನ್ನು ತೆರವುಗೊಳಿಸಲು ಆರೋಗ್ಯ ಪರೀಕ್ಷಕರಿಗೆ ತಿಳಿಸಲಾಯಿತು.

iii) ಸೌತ್ ಅವಿನ್ಯೂ ಬಡಾವಣೆಯಲ್ಲಿ ಘನತ್ಯಾಜ್ಯವನ್ನು ಸಂಗ್ರಹಿಸಲು ಆಟೋಟಿಪ್ಪರ್ ನ್ನು ಪ್ರತಿ ದಿನ ಬರುವಂತೆ ನೋಡಿಕೊಳ್ಳಲು ಅಧ್ಯಕ್ಷರು ಸೌತ್ ಅವಿನ್ಯೂ ಬಡಾವಣೆ ಕೋರಿರುವ ಬಗ್ಗೆ ಆರೋಗ್ಯ ಪರಿವೀಕ್ಷಕರು ರವರು ಕ್ರಮವಿಡುವುದು.

**3. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಂಬಂಧಿಸಿದ ವಿಷಯಗಳ ಬಗ್ಗೆ.**

i) ಬಿ.ಕೆ. ಸರ್ಕಲ್ ಬಳಿ ಬಿದ್ದಿರುವ ವಿದ್ಯುತ್ ಕಂಬವನ್ನು ತೆರವುಗೊಳಿಸಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆಸ್ಕಾಂ) ರವರು ತಿಳಿಸಿದರು.

ii) ವಾರ್ಡ್‌ನ ಕೆಲ ಬೀದಿ ದೀಪದ ಕಂಬಗಳ ನ್ಯೂಟ್ರಲ್ ಲೈನ್‌ಗಳಲ್ಲಿ ವಿದ್ಯುತ್ ಸೋರಿಕೆ ಆಗುತ್ತಿದ್ದು ಟೈಮರ್ ಸ್ವಿಚ್‌ಗಳನ್ನು ದುರಸ್ಥಿ ಪಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರಿಗೆ ಸೂಚಿಸಲಾಯಿತು.

iii) ವಿಶ್ವೋತ್ತಾಮ ಅಪಾರ್ಟ್‌ಮೆಂಟ್ ಬಳಿ ಪ್ಯಾನಲ್ ಬಾಕ್ಸನ್ನು ದುರಸ್ಥಿಗೊಳಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರಿಗೆ ತಿಳಿಸಲಾಯಿತು.

**4. ಸಂಚಾರ ನಿಯಮಗಳನ್ನು ಪಾಲಿಸುವ ಬಗ್ಗೆ.**

i) ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಅಗತ್ಯವಿರುವ ಕಡೆ ವೈಜ್ಞಾನಿಕವಾಗಿ ಹಂಪ್ಸ್, ರಸ್ತೆ ವಿಭಜಕಗಳನ್ನು ಅಳವಡಿಸುವ ಬಗ್ಗೆ ಸಾರ್ವಜನಿಕರು ಕೋರಿದರು, ಈ ಬಗ್ಗೆ ಸಂಚಾರಿ ಪೋಲೀಸರು ಅಗತ್ಯ ಕ್ರಮ ವಹಿಸುವುದು.

ii) ಸಂಚಾರಿ ಪೋಲೀಸರು ಮಾತನಾಡುತ್ತಾ ಹಾಲಿ ಇರುವ ಹಂಪುಗಳಲ್ಲಿ ಕೆಟೈಸ್‌ಗಳನ್ನು ಅಳವಡಿಸುವ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ನಂತರ ಕ್ರಮವಿಡುವುದಾಗಿ ಸಭೆಗೆ ತಿಳಿಸಿದರು. ಹೋಟೆಲ್ ಕೃಷ್ಣ ವಿಹಾರ್, ಅಕ್ಷರ ಗ್ರಾಂಡ್, ವಾಹನಗಳನ್ನು ಕಾನೂನು ವಿರುದ್ಧ ಪಾರ್ಕಿಂಗ್ ಮಾಡಿದ್ದಲ್ಲಿ ದಂಡ ವಿಧಿಸುವಂತೆ ಸೂಚಿಸಲಾಯಿತು.

iii) ಕೃಷ್ಣ ವಿಹಾರ್ ಹಾಗೂ ಅಕ್ಷರ ಗ್ರಾಂಡ್ ಹೋಟೆಲ್‌ಗಳ ಮುಂಭಾಗದಲ್ಲಿ ವಾಹನಗಳು ನಿಲ್ಲುತ್ತಿದ್ದು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಕ್ರಮ ವಹಿಸಲು ಸಾರ್ವಜನಿಕರು ಕೋರಿದರು. ಈ ಸಂಬಂಧ ಈಗಾಗಲೇ ದಂಡ ವಿಧಿಸಲಾಗುತ್ತಿದ್ದು ಪಾರ್ಕಿಂಗ್ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ಸಂಚಾರಿ ಪೋಲೀಸರು ಸಭೆಗೆ ತಿಳಿಸಿದರು.



Scanned by CamScanner

5. ಅರಣ್ಯಾ ಇಲಾಖೆ ವಿಷಯಗಳ ಬಗ್ಗೆ.

i) ಕ್ಲಾಸಿಕ್ ಆರ್ಚರ್ಡ್ಸ್, ಕೆಂಬತ್‌ಹಳ್ಳಿ ಮುಖ್ಯ ರಸ್ತೆಯಲ್ಲಿ ಮಳೆಗಾಳಿಯಿಂದ ಬಿದ್ದಿರುವ ಮರದ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

6. ರಸ್ತೆ ಕಾಮಗಾರಿಗಳ ಬಗ್ಗೆ

i) ಬಿ.ಕೆ.ಸರ್ಕಲ್ ನಿಂದ ಬನ್ನೇರುಘಟ್ಟ ರಸ್ತೆಯ ಸಂಪರ್ಕ ರಸ್ತೆಯು ಅಲ್ಲಲ್ಲಿ ಮುಳುಗುತ್ತಿದ್ದು ವಾರ್ಡ್ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ / ಸಮಸ್ಯೆಗಳ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಹಾಗೂ ಮುಂದಿನ ಸಭೆಗೆ ಅನುಪಾಲನಾವರದಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗಲು ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

14-6-2022
ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194, ಗೊಟ್ಟಿಗೆರೆ.

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ),ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
16. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
17. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
18. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.

Scanned by CamScanner